ಮಾಡುತ್ತಿದ್ದ. ಒಂದು ಬೇಸಗೆಯಲ್ಲಿ ಆತ ಪೆನುಗೊಂಡದಲ್ಲಿದ್ದ. ಆಗ್ಗೆ ಇನ್ನೂ ಎಂಟು ಘಳಿಗೆ ಸಮಯವಿತ್ತು. ಅಂದರೆ ಇಂದಿನ ಪ್ರಕಾರ ಸುಮಾರು ಮೂರೂಕಾಲು ಗಂಟೆ. ರಾಯನು ಹಂಪಿಯ ದಿಕ್ಕಿಗೆ ಮುಖ ಮಾಡಿ ಆಲೋಚಿಸುವಷ್ಟರಲ್ಲಿಯೇ ರಾಜನ ಮನೋಭಾವವನ್ನು ಗ್ರಹಿಸುವುದು ಬಜೆಬೆಣ್ಣೆಯೊಂದಿಗೆ ಅರಿತ ವಿದ್ಯೆಯಾಗಿದ್ದ ಗೊಡುಗುಪಾಲ ಹೊರಡಲು ಸಿದ್ಧನಾಗಿದ್ದ. ರಾಯ ಹಿಂದಕ್ಕೆ ತಿರುಗಿ ಗೊಡುಗುಪಾಲನತ್ತ ಪ್ರಶ್ನಾರ್ಥಕವಾಗಿ ನೋಡಿದ. 'ಸಿದ್ಧನಾಗಿರುವೆ' ಅನ್ನುವಂತೆ ಗೊಡುಗುಪಾಲ ಕೊಡೆಯನ್ನು ಮೇಲಕ್ಕೆತ್ತಿದ. ಒಂದು ಮಾತುಕತೆ ಇಲ್ಲದೆಯೇ ಕ್ಷಣದಲ್ಲಿ ಹಂಪಿ ಪಯಣಕ್ಕೆ ಸನ್ನಾಹ ನಡೆಯಿತು. ರಾಯ ಚಂದ್ರ ಶಾಲೆಯಿಂದ ಕೆಳಗಿಳಿದ.

ಪಂಚಕಲ್ಯಾಣಿ ಕುದುರೆ ಜೀನು ಅಲುಗಾಡಿಸುತ್ತ ಹಂಪಿಗೆ ಓಡಲು ಸಿದ್ಧವಾಗಿತ್ತು. ರಾಯನನ್ನು ಕಾಣುತ್ತಲೇ ಸಂತೋಷದಿಂದ ಕೆನೆಯಿತು.

ಸಮಯ ಏಳು ಘಳಿಗೆಗಳು ಮಾತ್ರವಿದ್ದಿತು. ಮುಸ್ಸಂಜೆ ವೇಳೆಗೆ ರಾಯನು ಪಂಪಾವಿರೂಪಾಕ್ಷನ ಸನ್ನಿಧಿಯಲ್ಲಿರಬೇಕು. ರಾಯ ಕುದುರೆಯೇರಿ ಲಗಾಮನ್ನೊಮ್ಮೆ ಜಗ್ಗುವುದೇ ತಡವಾಗಿ ಅದು ವಾಯುವೇಗ, ಮನೋವೇಗದೊಂದಿಗೆ ಗಂಟೆಗೆ ಮೂವತ್ತು ಮೈಲಿ ವೇಗದಲ್ಲಿ ಓಡತೊಡಗಿತು. ರಾಜ ಲಾಂಛನವಾದ ಬಿಳಿಸತ್ತಿಗೆ ರಾಯನ ಹಿಂದೆ ಇರಬೇಕಲ್ಲವೆ? ಕುದುರೆಯ ಮೇಲಿದ್ದ ರಾಯನಿಗೆ ಸಂಜೆಯ ಬಿಸಿಲೂ ಬೀಳದಂತೆ ಗೊಡುಗುಪಾಲ ಸತ್ತಿಗೆ ಹಿಡಿದು ಹಿಂದೆಯೆ ಓಡುತ್ತಿದ್ದ. ಕುದುರೆಯು ಸಹ ರಾಯನ ಮನಸ್ಸನ್ನು ತಿಳಿದುದ್ದೇ. ಮುಸ್ಸಂಜೆ ಹೊತ್ತಿಗೆ ರಾಯನನ್ನು ಹಂಪಿಗೆ ತಲುಪಿಸದಿದ್ದರೆ ಅದರ ಮರ್ಯಾದೆ ಏನಾಗಬೇಡ? ಗೊಡುಗುಪಾಲನಿಗೂ ಕುದುರೆಗೂ ಓಟದ ಪಂದ್ಯವೋ ಎಂದೆನಿಸುತ್ತಿತ್ತು. ಗೊಡುಗುಪಾಲನೇ ಎರಡು ಹೆಜ್ಜೆ ಮುಂದಿದ್ದನೇನೊ!

ಹಂಪಿ ಕಾಣುತ್ತಿತ್ತು. ವಿರೂಪಾಕ್ಷ ದೇವಾಲಯದ

